ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ

ಮಹಾತ್ಮ ಗಾಂಧಿ ರಸ್ತೆ, ಮೈಸೂರು – 570004.




## "ಉತ್ತಮ ಶ್ರವಣ, ಉತ್ತಮ ಜೀವನ."

**ಸಂಪರ್ಕಿಸಿ**

ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ,
ಎಂ.ಜಿ. ರಸ್ತೆ, ಮೈಸೂರು – 570004.

@ jssish@jssonline.org /
jssishmys@rediffmail.com

0821-2548229, 0821-2335014



# ಶ್ರವಣ ಸಾಧನದ ಸರಿಯಾದ ಬಳಕೆ

## ಹೀಗೆ ಮಾಡಿ



- ಶ್ರವಣ ಸಾಧನವನ್ನು ಉಪಯೋಗಿಸದೆ ಇರುವಾಗ, ಆಫ್ ಮಾಡಿ/ಬ್ಯಾಟರಿ ಕಂಪಾರ್ಟ್ಮೆಂಟ್ ಅನ್ನು ತೆಗೆದು ಅದರ ಬಾಕ್ಸ್ ನಲ್ಲಿಯೇ ಇಡಿ.
- ಶ್ರವಣ ಸಾಧನವನ್ನು ಎಚ್ಚರದಿಂದ ಉಪಯೋಗಿಸಿ/ನೋಡಿಕೊಳ್ಳಿ.
- ರಾತ್ರಿ ಮಲಗುವ ಮುನ್ನ, ಶ್ರವಣ ಸಾಧನದಿಂದ ಬ್ಯಾಟರಿಯನ್ನು ತೆಗೆದು, ಶ್ರವಣ ಸಾಧನವನ್ನು “ಡಿ ಹ್ಯೂಮಿಡಿ ಫೈಯರ್ ಬಾಕ್ಸ್” ನಲ್ಲಿಯೇ ಇರಿಸಿ. ಹೀಗೆ ಮಾಡುವುದರಿಂದ, ತೇವಾಂಶದಿಂದ ಶ್ರವಣ ಸಾಧನಕ್ಕೆ ಉಂಟಾಗುವ ಹಾನಿಯನ್ನು ತಡೆಯಬಹುದು.






- ಮಳೆಯಲ್ಲಿ, ಸ್ನಾನ ಮಾಡುವಾಗ, ಮುಖ ತೊಳೆಯುವಾಗ ಮತ್ತು ಮಲಗುವಾಗ ಶ್ರವಣ ಸಾಧನವನ್ನು ಧರಿಸಬೇಡಿ.
- ಕಿವಿಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳಿ, ಮತ್ತು ಒಣಗಿರುವಂತೆ ನೋಡಿಕೊಳ್ಳಿ.
- ಶ್ರವಣ ಸಾಧನವನ್ನು ತಂಪಾದ/ ಒಣ ಸ್ಥಳದಲ್ಲಿ ಇಡಬೇಕು.
- ಶ್ರವಣ ಸಾಧನವನ್ನು ಧರಿಸುವ ಮೊದಲು ಕಿವಿ ಅಚ್ಚನ್ನು/ ವ್ಯಾಕ್ಸ್ ಗಾರ್ಡ್ ಅನ್ನು ಪರಿಶೀಲಿಸಿ ಮತ್ತು ಸ್ವಚ್ಛ ಗೊಳಿಸಿ ಉಪಯೋಗಿಸಿ.



## ಹೀಗೆ ಮಾಡಬಾರದು

- ಶ್ರವಣ ಸಾಧನವನ್ನು ಬೀಳಿಸಬೇಡಿ ಅಥವಾ ಶ್ರವಣ ಸಾಧನಕ್ಕೆ ಯಾವುದೇ ಹಾನಿ ಮಾಡಬೇಡಿ.



- ಕಿವಿನೋವು ಅಥವಾ ಕಿವಿ ಸೋರುವಿಕೆ ಇದ್ದರೆ ಶ್ರವಣ ಸಾಧನವನ್ನು ಬಳಸಬೇಡಿ.



- ಕಿವಿಯ ಅಚ್ಚನ್ನು ತಿರುಗಿಸಬೇಡಿ ಅಥವಾ ರಿಸೀವರ್ ವೈರ್ ಅನ್ನು ಗಟ್ಟಿಯಾಗಿ ಎಳೆಯಬೇಡಿ.
- ಶ್ರವಣ ಸಾಧನವನ್ನು ಧರಿಸುವಾಗ ತಲೆಗೆ ಎಣ್ಣೆಯನ್ನು ಹಾಕಬಾರದು ಅಥವಾ ಹೇರ್ ಡ್ರೈಯರ್ ಗಳನ್ನು ಬಳಸಬಾರದು.
- ಶ್ರವಣ ಸಾಧನವನ್ನು ಎಲೆಕ್ಟ್ರಾನಿಕ್ ಮತ್ತು ತುಂಬಾ ಶಾಖವಿರುವ ಉಪಕರಣಗಳಿಂದ ದೂರವಿಡಿ.



- ಶ್ರವಣ ಸಾಧನವನ್ನು ನೀರಿನಿಂದ ದೂರವಿಡಿ.



